# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.32/2017

ಸಿಡಬ್ಲ್ಯೂ-5 ಪಿಡಬ್ಲ್ಯೂ-2

| | |
|---|---|
| ಹೆಸರುಃ | ಶ್ರೀ ಚಂದ್ರಶೇಖರ |
| ತಂದೆಯ ಹೆಸರುಃ | ಮಲ್ಲಣ್ಣ ಯಡ್ರಾಮಿ |
| ವಯಸ್ಸುಃ | 27 ವರ್ಷ |
| ಉದ್ಯೋಗಃ | ಚಾಲಕ |
| ವಾಸ ಸ್ಥಳಃ | ಹಂಚಿಲಿ, ತಾಃ ಸಿಂದಗಿ, ಜಿ. ವಿಜಯಪುರ |

ದಿನಾಂಕ 25-08-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಮೃತ ಯಲ್ಲಪ್ಪ ನನಗೆ ಅಳಿಯನಾಗಬೇಕು. ಹಂದರಕಿ ಗ್ರಾಮದ ಗಂಟೆರವಾರಿ ಎಂಬ ಸ್ಥಳದಲ್ಲಿ ಯಲ್ಲಪ್ಪ ಇತನ ಮೊಟಾರ ಸೈಕಲ ಅಪಘಾತವಾಗಿತ್ತು ಒಂದು ಟಿಪ್ಪರ ವಾಹನ ನಂ.KA-32 C-5379 ವಾಹನ ಯಲ್ಲಪ್ಪನ ಮೊಟಾರ ಸೈಕಲಗೆ ಹಾಯಿಸಿ ಅಪಘಾತಪಡಿಸಿತ್ತು. ಸದರಿ ಟಿಪ್ಪರ ವಾಹನ ಸ್ಪಿಡಾಗಿ ಬಂದು ದ್ವಿಚಕ್ರ ವಾಹನಕ್ಕೆ ಹಾಯಿಸಿತ್ತು. ಅಪಘಾತ ರಾತ್ರಿ 08.00 ಗಂಟೆ ಸುಮಾರು 7 ವರ್ಷಗಳ ಹಿಂದೆ ಆಗಿರುತ್ತದೆ. ನನಗೆ ಅಪಘಾತದ ವಿಷಯವನ್ನು ಹಿಟ್ಯಾಚಿ ವಾಹನ ಚಾಲಕ ದೇವರಾಜ ಎಂಬುವವರು ಪೋನ ಮೂಲಕ ತಿಳಿಸಿರುತ್ತಾರೆ. ಆಗ ನಾನು ಮತ್ತು ನನ್ನ ಕಾಕಾ ಶರಣು ಇಟಗಿ ಕೂಡಿಕೊಂಡು ಅಪಘಾತ ಸ್ಥಳಕ್ಕೆ ಹೋಗಿದ್ದು ಯಲ್ಲಪ್ಪನನ್ನು ನೋಡಲಾಗಿ, ತಲೆಗೆ, ಕಾಲಿಗೆ ಮತ್ತು ಮೈಗೆ ಭಾರಿ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದನು. ನಂತರ ಯಲ್ಲಪ್ಪನ ಮೃತ ದೇಹವನ್ನು ಸರಕಾರಿ ಆಸ್ಪತ್ರೆ ಸೇಡಂ ಇಲ್ಲಿಗೆ ತಂದು ಸೇರಿಕೆ ಮಾಡಿರುತ್ತೇವೆ. ಅಪಘಾತ ಟಿಪ್ಪರ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ. ಟಿಪ್ಪರ ವಾಹನದ ಚಾಲಕ ಬಸವರಾಜ ಅಂತಾ ಗೊತ್ತಾಗಿರುತ್ತದೆ. ನಾವು ಸ್ಥಳಕ್ಕೆ ಹೋದಾಗ ಸದರಿ ಬಸವರಾಜ ಟಿಪ್ಪರ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದನು. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಟಿಪ್ಪರ ವಾಹನ ಮತ್ತು ದ್ವಿಚಕ್ರ ವಾಹನವನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿ ಪೋಟೋದಲ್ಲಿರುವ ವಾಹನಗಳನ್ನು ಗುರುತಿಸುತ್ತಾರೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಘಟನೆಯ ಕುರಿತು ನನಗೆ ದಿನಾಂಕ 28.11.2016 ರಂದು ರಾತ್ರಿ 09.00 ಗಂಟೆಗೆ ದೇವರಾಜ ಇವರಿಂದ ಪೋನ ಮೂಲಕ ಗೊತ್ತಾಗಿರುತ್ತದೆ ಎಂದರೆ ಸರಿ. ಅವರು ಪೋನದಲ್ಲಿ ನಾನು ಮತ್ತು ಯಲ್ಲಪ್ಪ ಕೂಡಿ ಕೆಲಸ ಮುಗಿಸಿಕೊಂಡು ಹಿಟಾಚಿ ತೆಗೆದುಕೊಂಡು ಬೇರೆ ಸೈಟಗೆ ಹೋಗುತ್ತಿದ್ದೇವು

ಎಂದು ಹೇಳಿರುತ್ತಾರೆ ಎಂದರೆ ಸರಿ. ಯಲ್ಲಪ್ಪ ದ್ವಿಚಕ್ರ ವಾಹನದ ಮೇಲೆ ಹಿಟಾಚಿ ವಾಹನದ ಮುಂದುಗಡೆ ಬೆಳಕಿನಲ್ಲಿ ಹೋಗುತ್ತಿದ್ದರು ಎಂದರೆ ಸರಿ. ಅಪಘಾತವಾದಾಗ ರಾತ್ರಿ 08.30 ಆಗಿತ್ತು ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಹೆಚ್. ಎಲ್. ಎ. ಆರೋಪಿ ಪರ ವಕೀಲರಿಂದ</u>**

ನಾನು ಫೋನ ಮಾಡಿದಾಗ ಯಾದಗಿರಿ ಗ್ರಾಮದಲ್ಲಿ ಇದ್ದೆ. ಘಟನಾ ಸ್ಥಳಕ್ಕೆ ಬಂದಾಗ ರಾತ್ರಿ 09.30 ಗಂಟೆ ಆಗಿತ್ತು. ಯಾದಗಿರಿಯಿಂದ ಅಪಘಾತ ಸ್ಥಳಕ್ಕೆ ಬರಲು 40 ನಿಮೀಷ ತಗುಲಿದ್ದು ಇರುತ್ತದೆ. ಯಾದಗಿರಿಯಿಂದ ಅಪಘಾತ ಸ್ಥಳ ಸುಮಾರು 35 ಕಿ.ಮೀ. ಅಂತರದಲ್ಲಿ ಇರುತ್ತದೆ. ಯಾದಗಿರಿಯಿಂದ ಅಪಘಾತ ಸ್ಥಳಕ್ಕೆ ಬರಲು 1 ಗಂಟೆ ಸಮಯ ತಗಲುತ್ತದೆ ಎಂದರೆ ಸರಿಯಲ್ಲ. ಅಪಘಾತ ಮೇನ್ ರೋಡ ಮತ್ತು ಕಚ್ಚಾ ರಸ್ತೆಯಲ್ಲಿ ಆಗಿರುತ್ತದೆ. ಕಚ್ಚಾ ರಸ್ತೆಯಲ್ಲಿ ವಾಹನಗಳು ಸ್ಪಿಡಾಗಿ ಹೋಗುವುದಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಮೇಲೆ ಮೃತ ಯಲ್ಲಪ್ಪ ಮಾತ್ರ ಇದ್ದರು. ಯಲ್ಲಪ್ಪ ಮಧ್ಯ ಸೇವನೆ ಮಾಡಿ ಸ್ಪಿಡಾಗಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದನು ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನ್ನ ಅಳಿಯ ಇರುವುದರಿಂದ ನಾನು ಕಥೆ ಕಟ್ಟಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೃತರ ಕುಟುಂಬಕ್ಕೆ ಪರಿಹಾರ ವಿಮೆ ಹಣ ದೊರೆಯುವುದರ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೇ ಅಪಘಾತಪಡಿಸಿರುವುದಾಗಿ ನನಗೆ ಫೋನ್ ಮೂಲಕ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಪ್ಪ ಮಧ್ಯಪಾನ ಮಾಡುತ್ತಿದ್ದ ಆದ್ದರಿಂದ ಅವನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ದೇವರಾಜ ಆರೋಪಿಯ ವಿರುದ್ಧ ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH*